ದಿನಾಂಕಃ **03.07.2025** ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲು : 7ನೇ ಎದುರುದಾರರ ಪರ ವಕೀಲರಿಂದ :**

ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿ. 7ನೇ ಎದುರುದಾರರಾದ ಶೀಲಾರವರು ಬಾಲುರವರ ಹೆಂಡತಿ ಎಂದರೆ ಸರಿ. ನಿಪಿ-3 ರಲ್ಲಿ ನನ್ನ ತಂದೆಯವರಿಗೆ 24 ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. ನಾನು ಹಾಜರುಪಡಿಸಿರುವ ನಿಪಿ-15 ರಿಂದ 18 ರಲ್ಲಿ 7ನೇ ಎದುರುದಾರರಿಗೆ ಯಾವುದೇ ಭಾಗ ಕೊಟ್ಟಿಲ್ಲ ಎಂದರೆ ಸರಿ. ಸದರಿ ವ್ಯವಸ್ಥಾ ಪತ್ರಗಳನ್ನು ಅನುಕೂಲಕ್ಕೆ ತಕ್ಕಂತೆ ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ತಾಯಿಯವರು ಸಲ್ಲಿಸಿದ ದಾವೆಯಲ್ಲಿ ನಿಪಿ-19 ರಂತೆ ತೀರ್ಪು ಬಂದಿದ್ದು, ಅದರ ಪ್ರಕಾರ ಅವರಿಗೆ ಜೀವನಾಂಶ ಆದೇಶವಾಗಿದ್ದು, ದಾವಾ ಸ್ವತ್ತುಗಳ ಮೇಲೆ ಚಾರ್ಜ್ ಇರುತ್ತದೆ ಎಂದರೆ ಸರಿ. 7ನೇ ಎದುರುದಾರರಿಗೆ ಭಾಗವನ್ನು ಕೊಡಲು ನನಗೆ ಅಭ್ಯಂತರ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಎಲ್ಲರಿಗೂ ಸಮನಾಗಿ ಭಾಗ ಆಗಬೇಕು ಎನ್ನುತ್ತಾರೆ.

**ಪಾಟೀ ಸವಾಲು :** 2ನೇ ಎದುರುದಾರರ ಪರ ವಕೀಲರು ಕಾಲಾವಕಾಶ ಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**ಪ್ರಧಾನ ಹಿರಿಯ ಸಿಜೆ ಮತ್ತು**
**ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**